**ದಿನಾಂಕಃ 22-01-2021** **ಪಿ.ಡಬ್ಲ್ಯೂಃ 1** **ಓ.ಎಸ್ ನಂಃ91/2018**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ವಕೀಲರಿಂದಃ**

ಈ ದಾವಾಕ್ಕೆ ಪ್ರತಿವಾದಿಯರು ಏನು ಉತ್ತರ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಊರಲ್ಲಿ ವಿಚಾರಣೆ ಮಾಡಿದ್ದೆನೆ. ಇತರ ವಾದಿಯರು ನನಗೆ ಈ ಕೇಸನ್ನು ನಡೆಸಲು ಅಧಿಕಾರ ಪತ್ರ ಕೊಟ್ಟಿಲ್ಲ. ಆದರೆ ಬಾಯಿಮಾತಿನಲ್ಲಿ ಹೇಳಿರುವರು. ಈಗ 3-4 ವರ್ಷಗಳಿಂದ ಪ್ರತಿವಾದಿಗಳು ನಮಗೆ ಹರಕತ್ತು ಮಾಡುತ್ತಿರುವರು. ಶೇಖಪ್ಪನ ಹೆಸರಿಗೆ ದಾವಾ ಸ್ವತ್ತು ದಾವಾ ಹಾಕುವ ಎಷ್ಟು ವರ್ಷಗಳ ಮೊದಲು ವರ್ಗಾವಣೆ ಆಗಿ ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಶೆಡ್ಯೂಲ್-ಎ ದಾವಾ ಸ್ವತ್ತುಗಳಲ್ಲಿ ಒಟ್ಟು 3 ಬೋರ್ ಗಳು ಇವೆ. ಶೆಡ್ಯೂಲ್-ಎ ದಾವಾ ಸ್ವತ್ತುಗಳಲ್ಲಿ ಹಾಕಿರುವ ಪೈಪಲೈನಗಳಿಂದ ಸದರಿ ಶೆಡ್ಯೂಲ್-ಎ ಸ್ವತ್ತುಗಳಿಗೆ ಪೂರೈಕೆ ಆಗುತ್ತದೆ. ದಾವಾ 'ಬಿ'

**ದಿನಾಂಕಃ 22-01-2021** **ಪಿ.ಡಬ್ಲ್ಯೂಃ 1** **ಓ.ಎಸ್ ನಂಃ91/2018**

ಶೆಡ್ಯೂಲ್ ಸ್ವತ್ತುಗಳಲ್ಲಿ 2 ಬೋರ್ ಗಳು ಇವೆ. ಸದರಿ ಬೋರ್ ನಿಂದ ಸಂಪೂರ್ಣ ದಾವಾ 'ಬಿ' ಸ್ವತ್ತಿಗೆ ನೀರನ್ನು ಹರಿಸುತ್ತಾರೆ ಎಂದರೆ ಸರಿ.

ಶೆಡ್ಯೂಲ್ 'ಎ' ಮತ್ತು 'ಬಿ' ಸ್ವತ್ತು ಒಂದೇ ಆಸ್ತಿ ಎಂದರೆ ಸರಿ. ದಾವಾ ಬಿ ಸ್ವತ್ತು ಕೂಡಾ ಒಂದೇ ಆಸ್ತಿ ಎಂದರೆ ಸರಿ. 'ಎ' ಶೆಡ್ಯೂಲ್ ದಾವಾ ಸ್ವತ್ತಿನ ನೀರು 'ಬಿ' ಶೆಡ್ಯೂಲ್‌ಗೆ ಹೋಗುವುದಿಲ್ಲ ಮತ್ತು 'ಬಿ' ಶೇಡ್ಯೂಲ್ ನ ನೀರು 'ಎ' ಶೆಡ್ಯೂಲ್ ಗೆ ಬರುವುದಿಲ್ಲ ಎಂದರೆ ಸರಿ. ದಾವಾ ಬಿ ಸ್ವತ್ತಿನ ದಕ್ಷಿಣಕ್ಕೆ ಸರವು ಇದೆ. ಆ ಸರವು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತದೆ ಎಂದರೆ ಸರಿ. ಸದರಿ ಸರವು ಸುಮಾರು 10 ಅಡಿ ಅಗಲ ಇದೆ. ಸದರಿ ಸರುವು 5 ಅಡಿ ಆಳವಿದೆ. ಸದರಿ ಸರುವಿನ ದಕ್ಷಿಣಕ್ಕೆ ನಮ್ಮ ಜಮೀನಿನಲ್ಲಿರುವ ಒಂದು ಬೋರ್ ಇದೆ ಎಂದರೆ ಸರಿ. ಸದರಿ ಬೋರ್ ನ ದಕ್ಷಿಣಕ್ಕೆ ನನ್ನ ಉಳಿದ ಬೋರ್ ಗಳು ಇವೆ ಎಂದರೆ ಸರಿ.

ಸರ್ವೇ ನಂಬರಃ102 ರಲ್ಲಿ ನನ್ನ ಅಣ್ಣ-ತಮ್ಮಂದಿರು ಇರುವರು. ಅವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿ. ಅದು ವಾರಿಸು ಪ್ರಕಾರ ಬಂದಿರುತ್ತದೆ ಎಂದರೆ ಸರಿ. ಅದು ಖರೀದಿ ಹಿಡಿದಿದ್ದು ಅಲ್ಲ ಎಂದರೆ ಸರಿ. ದಾವಾ ಬಿ ಸ್ವತ್ತಿನ ಪಶ್ಚಿಮಕ್ಕೆ ಸ. ನಂಬರಃ102 ಜಮೀನು ಇರುವುದು ಎಂದರೆ ಸರಿ. ಸದರಿ 102 ಜಮೀನು ದಾವಾ ಎ ಸ್ವತ್ತುಗಳ ಪಶ್ಚಿಮಕ್ಕೆ ಹೊಂದಿಕೊಂಡು ಇದೆ ಎಂದರೆ ಸರಿ. ಸರುವು ದಾವಾ 'ಎ' ಮತ್ತು 'ಬಿ' ಶೆಡ್ಯೂಲ್ ಗಳ ಆಸ್ತಿಯ ಮಧ್ಯ ಹೋಗಿವೇ ಎಂದರೆ ಸರಿ. ಅದೇ ರೀತಿ ಸದರಿ ಸರುವು ದಾವಾ ಎಲ್ಲಾ ಸ್ವತ್ತುಗಳು ಅಂದರೆ ಸ. ನಂಬರಃ 101 ಮತ್ತು ಸ. ನಂಬರಃ 102 ರ ಮಧ್ಯದಲ್ಲಿ ಇವೆ ಎಂದರೆ ಸರಿ.

9 ಮತ್ತು 10 ನೇ ವಾದಿಯರಿಗೆ ಶೇಡ್ಯೂಲ್ 'ಎ' ನಲ್ಲಿ ಹಿಸ್ಸಾ ಇದೆ ಎಂದರೆ ಸರಿ. 9 ನೇ ವಾದಿಯ

ಭಾಗಕ್ಕೆ ಎ ಶೆಡ್ಯೂಲ್‌ನಲ್ಲಿ 4 ವರೇ ಎಕರೆ, ಮತ್ತು 10 ನೇ ವಾದಿಯ ಭಾಗಕ್ಕೆ ಎ ಶೆಡ್ಯೂಲ್‌ನಲ್ಲಿ 4 ವರೇ ಎಕರೆ ಜಮೀನು ಬಂದಿರುವುದು. ಸದರಿ 9 ಮತ್ತು 10 ನೇ ವಾದಿಯರು ತಮ್ಮ ಭಾಗಕ್ಕೆ ಬಂದ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವರು ಎಂದರೆ ಸರಿ. ಸ. ನಂಬರ:102 ರಲ್ಲಿ ನನಗೆ ಮತ್ತು ಇತರ ವಾರಿಸುದಾರರರಿಗೆ ಹಿಸ್ಸಾ ಬಂದಿರುತ್ತದೆ ಎಂದರೆ ಸರಿ. ದಾವಾ ಬಿ ಸ್ವತ್ತು ಪ್ರತಿವಾದಿಗಳ ಕಬ್ಜಾದಲ್ಲಿದ್ದು, ಅದರ ವಿ. 12 ಎಕರೆ 29 ಗುಂಟೆ ಇರುವುದು ಎಂದರೆ ಸರಿಯಲ್ಲ. ಅವರ ಜಮೀನಿಗಳಲ್ಲಿ 6 ಬೋರ್ ಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಪೂರ್ವಜರಿಂದ ಮೆಲಿ ಹೇಳಿದ ವಿಸ್ತೀರ್ಣದ ಜಮೀನಿನಲ್ಲಿ ಪೈಪಲೈನ್ ಹಾಕಿ ಪ್ರತಿವಾದಿಗಳು

**ದಿನಾಂಕ: 22-01-2021** **ಪಿ.ಡಬ್ಲ್ಯೂ: 1 ಓ.ಎಸ್ ನಂ:91/2018**

ಸಾಗುವಳಿ ಮಾಡಿಕೊಂಡು ಬರುತ್ತಿರುವರು ಎಂದರೆ ಸರಿಯಲ್ಲ. ಸದರಿ ದಾವಾ ಬಿ ಸ್ವತ್ತಿನ ಪಹಣಿಯಲ್ಕಿ ಕಡಿಮೆ ವಿಸ್ತೀರ್ಣ ದಾಖಲಾಗಿರುವುದು ಎಂದರೆ ಸರಿಯಲ್ಲ. ನೈಜತೆಯಲ್ಲಿ ಪ್ರತಿವಾದಿಗಳು 12 ಎಕರೆ 29 ಗುಂಟೆ ಜಮೀನಿನಲ್ಲಿ ಸ್ವಾಧೀನ ಇರುವರು ಎಂದರೆ ಸರಿಯಲ್ಲ. ನಾವು ದಾವಾ ಎ ಸ್ವತ್ತಿಗಳಲ್ಲಿ ಕಬ್ಬು ಬೆಳೆದಿದ್ದೆವೆ ಎಂದರೆ ಸರಿ. ಕಬ್ಬನ್ನು ಸಾಗಾಟ ಮಾಡಲು ಲಾರಿ ಬಂದಿರುವುದಿಲ್ಲ. ನಾವೇ ಅದನ್ನು ಗಾಡಿಗಳಲ್ಲಿ ತೆಗೆದುಕೊಂಡು ಹೋಗುತ್ತೇವೆ.

ಪ್ರತಿವಾದಿಗಳು ಬೆಳದ ಕಬ್ಬನ್ನು ಸಾಗಿಸಲು ಸರುವು ಮೂಲಕ ಲಾರಿ ಬಂದಿತ್ತು. ಸದರಿ ಸರಿವಿನ ಉತ್ತರ ಭಾಗಕ್ಕೆ ಲಾರಿ ಹೋಗಿ ಕಬ್ಬನ್ನು ಸಾಗಿಸಿಕೊಂಡು ಹೋಯಿತು ಎಂದರೆ ಸರಿ. ಅದೇ ರೀತಿ ಸದರಿ ಸರುವಿನ ದಕ್ಷಿಣ ಭಾಗದಲ್ಲಿ ಇರುವ ನಮ್ಮ ಜಮೀನಿಗೂ ಕೂಡಾ ಲಾರಿ ಬರಲು ಸಾಧ್ಯವಿದೆ ಎಂದರೆ ಸರಿ. ದಾವಾ ಎ ಸ್ವತ್ತುಗಳ ಉತ್ತರ ಭಾಗಕ್ಕೆ ದಾವಾ ಬಿ ಸ್ವತ್ತು ಇದೆ ಎಂದರೆ ಸರಿ. ನಾನು ಪ್ರತಿವಾದಿಯರ ವಿರುದ್ಧ ಪೋಲೀಸ ಠಾಣೆಯಲ್ಲಿ ಲಿಖಿತ ದೂರು ನೀಡಿದ್ದೆನೆ. ನಮ್ಮ ರಾಜಕೀಯ ಒತ್ತಡಕ್ಕೆ ಒಳಗಾದ ಪೋಲೀಸರು ಪ್ರತಿವಾದಿಗಳಿಗೆ 12 ಏಕರೆ 29 ಗು. ಯಲ್ಲಿ ಸಾಗುವಳಿ ಮಾಡಬಾರದು ಎಂದು ಹೆದರಿಸಿರದರು ಎಂದರೆ ಸರಿಯಲ್ಲ. ಠಾಣೆಯಲ್ಲಿ ನಾನು ಪಹಣಿಯಲ್ಲಿ ನಮ್ಮ ವಿಸ್ತೀರ್ಣ ಹೆಚ್ಚು ಇದ್ದು ಕಬ್ಜಾ ಕಡಿಮೆ ಇದೆ ಎಂದು ಬರೆದುಕೊಟ್ಟಿದ್ದೆನೆ ಎಂದರೆ ಸುಳ್ಳು. ಪ್ರತಿವಾದಿಯರು ಹೆಚ್ಚಿನ ಜಮೀನಿನಲ್ಕಿ ಅಂದರೆ ನಮಗೆ ಸೇರಿದ ಜಮೀನಿನಲ್ಕಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ನಾನು ಹೇಳಿದ್ದೆನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲು: ಸಮಯ ಕೋರಿದ ಕಾರಣ ಮುಂದೂಡಲಾಯಿತು.**

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪ್ರಧಾನ ಸಿವಿಲ್ ಜಡ್ಜ್ ಕೊಪ್ಪಳ.**